ಬರುವುದಕ್ಕೂ ಮೇಗಲೆ ಮೊಬೈಲಿನಲ್ಲಿ ಏನೋ ನೋಡುತ್ತ ಕೂತಿದ್ದವಳು, 'ಅಬ್ಬಾ. ಥ್ಯಾಂಕ್ ಗಾಡ್. ಮುರುಗಾ. ನೀನೇ ಕಾಪಾಡಿದೆ' ಎನ್ನುತ್ತ ಎರಡೂ ಗಲ್ಲ ಮುಟ್ಟಿಕೊಂಡು ಎದೆ ಮೇಲೆ ಕೈಯಿಟ್ಟುಕೊಂಡಿದ್ದಕ್ಕೂ ಸರಿಯಾಯಿತು. ಏನಾಯಿತಪ್ಪ ಎಂದು ಹತ್ತಿರ ಬಂದ ವಿನುತಾಳನ್ನು ಕಣ್ಸನ್ನೆ ಮಾಡಿ ಹತ್ತಿರ ಕರೆದು ಕೂರಿಸಿಕೊಂಡು, ಎಡಗೈನಲ್ಲಿ ಹಿಡಿದಿದ್ದ ಮೊಬೈಲ್ ಪರದೆಯನ್ನು ತೋರಿಸುತ್ತ, 'ನೋಡಿಲ್ಲಿ' ಎಂದಳು. ಯಾರದ್ದೋ ಫೇಸ್‌ಬುಕ್ ಪುಟ, ಗಂಡನೊಬ್ಬ ಹೆಂಡತಿಯೊಂದಿಗೆ ಅದ್ಯಾವುದೋ ಧಾರ್ಮಿಕ ಸಮಾರಂಭದಲ್ಲಿ ತೆಗೆಸಿಕೊಂಡ ಸೆಲ್ಫೀ. ಅದನ್ಯಾಕೆ ತನಗೆ ತೋರಿಸ್ತಾ ಇದ್ದಾಳೆ. ಇದರಲ್ಲಿ ಮುರುಗಾ ದೇವರು ಇವಳನ್ನು ಯಾವುದರಿಂದ ಕಾಪಾಡಿದ ಎಂದು ವಿನುತಾಳಗೆ ತಲೆಬುಡ ತಿಳಿಯಲಿಲ್ಲ. 'ಅದೇಪ್ಪ.ನನ್ನ ಗಂಡ ತೀರಿದ ಮೇಲೆ ನಾನು ಒಬ್ಬರನ್ನ ಇಷ್ಟಪಟ್ಟಿದ್ದೆ ಎಂದಿದ್ದೆನಲ್ಲ ಇವ್ರೇ' ಆಮೇಲೆ ಸಟಕ್ಕನೆ ಫೇಸ್‌ಬುಕ್ ಪುಟ ಮುಚ್ಚಿ, ಮೊಬೈಲ್ ಪಕ್ಕಕ್ಕಿಟ್ಟಳು. 'ಅಂವನ ಹಣೆ ಮೇಲೆ ಅಷ್ಟು ದೊಡ್ಡ ಎರಡು ನಾಮ ಇದ್ದಿದ್ದನ್ನು ನೀ ನೋಡಲಿಲ್ಲವೇನೆ? ನಮ್ಮ ಸಂಬಂಧ ಇನ್ನೂ ಇದ್ದಿದ್ದರೆ, ಆ ನಾಮಗೀಮ ಇವೆಲ್ಲ ಎಷ್ಟು ಕಿರಿಕಿರಿ ಅನ್ನಿಸ್ತಿತ್ತು ನೋಡು. ಈಗ ಅಂವಾ ನನಗೆ ಸಂಬಂಧ ಸೂತ್ರವೇ ಇರದ ಕೇವಲ ಯಾರದ್ದೋ ಗಂಡ. ಈ ಥರದ ಪೋಸು ಕೊಡೋ ಕೋಟಿಗಟ್ಟಲೆ ಗಂಡಸರಲ್ಲಿ ಅಂವನೂ ಒಬ್ಬ. ಅಬ್ಬಾ...ಸದ್ಯ ಎಂದೋ ಎಲ್ಲ ಮುಗಿದಿದ್ದು ಒಳ್ಳೇದೇ ಆಯಿತು' ಎಂದು ಅದ್ಯಾವುದೋ ಪ್ರಪಾತಕ್ಕೆ ಬೀಳುವುದರಿಂದ ತಪ್ಪಿಸಿಕೊಂಡೆ ಎಂಬಂತೆ ದೀರ್ಘವಾಗಿ ಉಸಿರೆಳೆದುಕೊಂಡಳು. ವಿನುತಾ ಮಾತಾಡದೇ ಅವಳ ಕೈ ಒತ್ತಿದಳು.

'ಒಂದು ಬಾಂಧವ್ಯ, ಒಂದು ಅಪ್ಪುಗೆ, ಒಂದು ಬೆಚ್ಚಗಿನ ಸ್ಪರ್ಶ ಬೇಕು ಅಂತ ಮನಸ್ಸು ಚೀರಿ ಹೇಳ್ತಾನೆ ಇರುತ್ತೆ ನಿಜ. ಆದ್ರೆ ಬಾಂಧವ್ಯ ಅಂತ ಭ್ರಮಿಸಿದ ಅಗೋಚರ ಹಗ್ಗಗಳಿಗಿಂತ ಈ ಬಿಡುಗಡೆಯೇ ನೂರು ಪಾಲು ಉತ್ತಮ ಅಂತ ಈಗ ಅನ್ನಿಸ್ತಿದೆ. ನೋಡು. ರಾಜೋ ಹೇಳಿದಳಲ್ಲ. ಅದೇನೋ ಭಗ್ ಅಂತ ಒಂದು ಕಿಡಿ ಹೊತ್ತಿಕೊಳ್ಳುತ್ತೆ. ಅಬ್ಬ. ಆ ಸೆಲ್ಫೀ ಈಗ ಹೊತ್ತಿಸಿದ್ದು ಅದೇ ಥರಾ ಕಿಡಿ' ಮೇಗಲೆ ಎದೆಯಲ್ಲಿ ನಿಜಕ್ಕೂ ಬೆಳಕಿನ ಕಿಡಿಯೊಂದು ಹೊತ್ತಿಕೊಂಡಿತೇನೋ, ಅದನ್ನು ಆರಲು ಬಿಡುವುದಿಲ್ಲ ಎಂಬಂತೆ ಎರಡೂ ಅಂಗೈಗಳನ್ನು ಎದೆ ಮೇಲಿಟ್ಟುಕೊಂಡಳು. ನಿಡಿದಾಗಿ ಉಸಿರೆಳೆದುಕೊಂಡಳು.



ಮರು ಕ್ಷಣದಲ್ಲಿ ಟೀಪಾಯಿಯ ಮೇಲಿದ್ದ ವೈನ್ ಬಾಟಲಿ ಕೈಗೆತ್ತಿಕೊಂಡಳು. ಎಷ್ಟಿದೆ ಎಂದು ನೋಡುವಂತೆ ಮೇಲೆತ್ತಿ ಹಿಡಿದಳು. ಬಾಡಿದ ಕಣ್ಣುಗಳಲ್ಲಿ ನಸುನಗುವ ತುಳುಕಿಸುತ್ತ, 'ಇದೊಂಚೂರೇ ಇದೆಯಲ್ಲ. ಬಾ. ಮುಗಿಸಿಬಿಡಣ... ಇದೀಗ ಬಿಡುಗಡೆಯ ಖುಷಿಗೆ' ಎನ್ನುತ್ತ ಬಾಟಲಿಯಲ್ಲಿ ಮಿಕ್ಕಿದ್ದ ವೈನನ್ನು ಎರಡೂ ಗ್ಲಾಸಿಗೆ ಸಮನಾಗಿ ಸುರಿದಳು.

'ಹೌದು. ಸೆಲ್ಫೀ ಹೊತ್ತಿಸಿದ ಬೆಳಕಿನ ಕಿಡಿಗೆ. ರಾಜೋ ಅತ್ತೆ ಹೇಳಿದ ಲಾಟೀನಿಗೆ' ವಿನುತಾ ನಾಟಕೀಯವಾಗಿ ಹೇಳುತ್ತ ಗ್ಲಾಸ್ ಮೇಲೆತ್ತಿ ಹಿಡಿದಳು. 'ಹೌದೌದು. ಇದು ನಮ್ಮ ಲಾಟೀನಿಗೆ. ನಾವೇ ತರುವ ಬೆಳಗಿಗೆ' ಎಂದು ಮೇಗಲೆಯೂ ಗ್ಲಾಸ್ ಎತ್ತಿ ಹಿಡಿದು ಅಷ್ಟೇ ನಾಟಕೀಯವಾಗಿ ಹೇಳುತ್ತಾ, ನಾಟಕಕಾರ ಮನದಲ್ಲಿಯೂ ಆಲೋಚಿಸದ, ಬರೆಯದ ಸಾಲುಗಳನ್ನು ರಂಗದ ಮೇಲೆ ಹಠಾತ್ತನೆ ಆಡಿಬಿಡುವ ಅಸಂಗತ ನಾಟಕವೊಂದರ ಪಾತ್ರಧಾರಿಗಳೋ ಎಂಬತೆ ಗ್ಲಾಸ್ ಮೇಲೆತ್ತಿ ಹಿಡಿದಿದ್ದ ಇಬ್ಬರೂ ಪರಸ್ಪರರನ್ನು ಕಂಡು ಕೈಯಲ್ಲಿದ್ದ ಗ್ಲಾಸಿನಿಂದ ವೈನ್ ಕೆಳಗೆ ತುಳುಕುವಷ್ಟು ಜೋರಾಗಿ ಕುಲುಕುಲು ಮಾಡುತ್ತಾ ನಕ್ಕರು.

●